ದಿನಾಂಕಃ 05.08.2025 ರಂದು ಪಿ.ಡಬ್ಲ್ಯೂ-1 ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಕೆ.ಕೆ.ಟಿ. ವಕೀಲರಿಂದಃ**

1. ದಾವಾ ಸ.ನಂ.3/1 ರ ಒಟ್ಟು ವಿಸ್ತೀರ್ಣ ಹದಿಮೂರು ಮುಕ್ಕಾಲು ಗುಂಟೆ ಎಂದರೆ ಸರಿ. ಸದರಿ ಹದಿಮೂರು ಮುಕ್ಕಾಲು ಗಂಟೆಯ ಚೆಕ್ಕುಬಂದಿ ಏನು ಎಂದರೆ ಪೂರ್ವಕ್ಕೆ ವೆಂಕಟಯ್ಯರವರ ಜಮೀನು, ಪಶ್ಚಿಮಕ್ಕೆ ನನ್ನ ಮತ್ತು ಪುಟ್ಟರಾಜುರವರ ಜಮೀನು, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಪುಟ್ಟರಾಜು ಮತ್ತು ನನ್ನ ಜಮೀನು. ಪ್ರತಿವಾದಿ ನನ್ನ ತಮ್ಮ. ಪ್ರತಿವಾದಿ ಸ.ನಂ.3/1 ರಲ್ಲಿ ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಸರಿ. ಮನೆಯ ಸುತ್ತ ತೆಂಗಿನ ಮರ ಬೆಳೆಸಿರುತ್ತಾರೆ ಎಂದರೆ ಸರಿ. ಪ್ರತಿವಾದಿ ಸ್ವಾಧೀನದಲ್ಲಿರುವ 7 ಗುಂಟೆ ಜಮೀನಿನ ಚೆಕ್ಕುಬಂದಿ ಏನು ಎಂದರೆ 7 ಗುಂಟೆ ಇರುವುದಿಲ್ಲ ಆರು ಮುಕ್ಕಾಲು ಗುಂಟೆ ಇರುತ್ತದೆ. ಪ್ರತಿವಾದಿಯ ಜಮೀನಿನ ಪೂರ್ವಕ್ಕೆ ವೆಂಕಟಯ್ಯರವರ ಜಮೀನು, ಪಶ್ಚಿಮಕ್ಕೆ ನನ್ನ ಜಮೀನು, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಪುಟ್ಟರಾಜು ಮತ್ತು ನನ್ನ ಜಮೀನು.

2. ದಾವಾ ಸ್ವತ್ತಿನ ಚೆಕ್ಕುಬಂದಿಯ ಒಳಗಡೆ ಮನೆ ಕಟ್ಟಿಕೊಂಡಿರುತ್ತೇನೆ ಎಂದರೆ ಸರಿ. ಸದರಿ ಮನೆಯ ಚೆಕ್ಕುಬಂದಿ ಏನು ಎಂದರೆ ಪೂರ್ವಕ್ಕೆ ಶಂಕರಶೆಟ್ಟಿ ಮನೆ, ಪಶ್ಚಿಮಕ್ಕೆ ಚಂದ್ರುರವರ ಮನೆ, ಉತ್ತರಕ್ಕೆ ನನಗೆ

ಸೇರಿದ ಖಾಲಿ ಜಾಗ ಮತ್ತು ರಸ್ತೆ, ದಕ್ಷಿಣಕ್ಕೆ ನನ್ನ ಉಳಿಕೆ ಜಮೀನು. ದಾವಾ ಸ್ವತ್ತಿನ ಚೆಕ್ಕುಬಂದಿ ಏನು ಎಂದರೆ ಪೂರ್ವಕ್ಕೆ ಶಂಕರಶೆಟ್ಟರವರ ಜಮೀನು ಮತ್ತು ಮನೆ, ಪಶ್ಚಿಮಕ್ಕೆ ಚಂದ್ರುರವರ ಜಮೀನು, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ನನ್ನ ಬಾಬ್ತು ಜಮೀನು.

3. ನಿಪಿ 4 ನಕಾಶೆಯನ್ನು ಯಾವಾಗ ಮಾಡಿಸಿರುತ್ತೀರ ಎಂದರೆ 4-5 ವರ್ಷಗಳ ಹಿಂದೆ. ಅದನ್ನು ಪಡೆದುಕೊಳ್ಳಲು ನಾನೇ ಅರ್ಜಿ ಸಲ್ಲಿಸಿರುತ್ತೇನೆ. ನಕಾಶೆ ಮಾಡಲು ಬಾಜುದಾರರಿಗೆ ನೋಟೀಸ್ ನೀಡಿರುತ್ತಾರೆ. ಸದರಿ ನೋಟೀಸನ್ನು ಹಾಜರುಪಡಿಸಿದ್ದೀರ ಎಂದರೆ ನೆನಪಿಲ್ಲ. ನಿಪಿ 4 ನಕಾಶೆಯನ್ನು ತಯಾರಿಸಿದಾಗ ಯಾರಿಗೂ ನೋಟೀಸ್ ನೀಡದೆ ನಕಾಶೆ ತಯಾರಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯ ಸ್ವಾಧೀನದಲ್ಲಿರುವ ಜಮೀನಿಗೆ ಸಂಬಂಧಪಟ್ಟಂತೆ ನಕಾಶೆ ತಯಾರಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಂತರ ಪ್ರತಿವಾದಿಯ ಸ್ವಾಧೀನಕ್ಕೆ ನಾನೇ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಆರುಮುಕ್ಕಾಲು ಗುಂಟೆ ಸ್ವಾಧೀನಕ್ಕೆ ಪ್ರತಿವಾದಿ ತೊಂದರೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಪ್ರತಿವಾದಿಯ ನಡುವೆ ಕ್ರಿಮಿನಲ್ ಮೊಕದ್ದಮೆಗಳು ಮತ್ತು ಬೇರೆ ದಾವೆಗಳಿವೆ ಎಂದರೆ ಸರಿ. ಪ್ರತಿವಾದಿಗೆ ತೊಂದರೆ ಕೊಡಲು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಹದ್ದುಬಸ್ತು ಮಾಡಿದಾಗ ಪ್ರತಿವಾದಿ ಹಾಜರಿದ್ದರ ಎಂದರೆ

ಹೌದು. ಸರ್ವೆ ಮಾಡಿದಾಗ ಮಹಜರ್ ಮಾಡಿ ಅದಕ್ಕೆ ಸ್ಥಳೀಯರ ಸಹಿ ಪಡೆಯುತ್ತಾರೆ ಎಂದರೆ ಸರಿ. ಹದ್ದುಬಸ್ತು ಮಾಡಿದಾಗ ಮಹಜರ್ ಮಾಡಿರುವುದಿಲ್ಲ ಮತ್ತು ಪ್ರತಿವಾದಿ ಹಾಜರಿರುವುದಿಲ್ಲ ಆದ ಕಾರಣ ಮಹಜರ್ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕೇವಲ ಆರುಮುಕ್ಕಾಲು ಗುಂಟೆ ಮಾತ್ರ ಸ್ವಾಧೀನದಲ್ಲಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಮೋಸ ಮಾಡಲು ರಾಜಿ ಅರ್ಜಿಯಲ್ಲಿ ಪ್ರತಿವಾದಿಗೆ ಆರುಮುಕ್ಕಾಲು ಗುಂಟೆ ಮಾಡಿಸಿ ನನಗೆ 7 ಗುಂಟೆಯನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಶ್ರೀಮತಿ ಸ್ನೇಹಾ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಆಲೂರು.